

# ಕಳೆದ ದಿನಗಳ ನೆನಪುಗಳು



(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)


ಮೂಲ ಬಂಗಾಳಿ: ಸ್ವಾಮಿ ಶ್ರದ್ಧಾನಂದ

ಅನುವಾದ: ಪ್ರವ್ರಾಜಿಕಾ ಯೋಗಾತ್ಮಪ್ರಾಣಾ


## ಭಾಗ ೧



ಶ್ರೀರಾಮಕೃಷ್ಣ ಮಹಾಸಂಘದ ಆರನೇ ಪರಮಾಧ್ಯಕ್ಷರಾಗಿದ್ದ ಸ್ವಾಮಿ ವಿರಜಾನಂದರು (ಕ್ರಿ.ಶ. ೧೮೭೩-೧೯೫೧) ಶ್ರೀರಾಮಕೃಷ್ಣರ ಹಾಗೂ ಶ್ರೀಮಾತೆ ಶಾರದಾದೇವಿಯವರ ಆಧ್ಯಾತ್ಮಿಕ ಶಕ್ತಿ ಹಾಗೂ ದಿವ್ಯಲೀಲೆಯ ಪ್ರಭಾವ ಸ್ವಾಮಿ ವಿವೇಕಾನಂದರ ಹಾಗೂ ಇನ್ನಿತರ ನೇರ ಶಿಷ್ಯರ ಮೂಲಕ ಎಲ್ಲೆಡೆ ಪಸರಿಸುತ್ತಿದ್ದುದನ್ನು ಹತ್ತಿರದಿಂದ ಕಂಡರು. ಶ್ರೀಮಾತೆಯವರಿಂದ ಮಂತ್ರದೀಕ್ಷೆ ಪಡೆದು, ಅವರ ಕೃಪೆಗೆ ಪಾತ್ರರಾದ ವಿರಜಾನಂದರು ಮುಂದೆ ಸ್ವಾಮಿ ವಿವೇಕಾನಂದರಿಂದ ಸಂನ್ಯಾಸ ದೀಕ್ಷೆ ಸ್ವೀಕರಿಸಿದರು. ೧೮೯೧ರಷ್ಟು ಆರಂಭದ ಹಂತದಲ್ಲೇ ರಾಮಕೃಷ್ಣ ಸಂನ್ಯಾಸೀ ಸಂಘವನ್ನು ಸೇರಿಕೊಂಡ ಅವರು, ಶ್ರೀರಾಮಕೃಷ್ಣರ ಬಹುಮಂದಿ ನೇರ ಶಿಷ್ಯರೊಡನೆ ಒಡನಾಡಿದರು. ಶ್ರೀರಾಮಕೃಷ್ಣ ಮಹಾಸಂಘದ ಸ್ಥಾಪನೆ, ಬೆಳವಣಿಗೆ, ಹಲವಾರು ಪ್ರಮುಖ ಘಟನೆಗಳಿಗೆ ಸಾಕ್ಷಿಯಾಗಿದ್ದ ವಿರಜಾನಂದರ ಜೀವನದ ಘಟನೆಗಳೆಲ್ಲವೂ ರಾಮಕೃಷ್ಣ ಮಹಾಸಂಘದ ಬೆಳವಣಿಗೆಯ ಕಥೆಯನ್ನು ಸುಂದರವಾಗಿ ಚಿತ್ರಿಸುತ್ತವೆ.

ಬಂಗಾಳಿಯಲ್ಲಿ ಸ್ವಾಮಿ ಶ್ರದ್ಧಾನಂದರು ರಚಿಸಿದ '**ಅತೀತೇರ್ ಸ್ಮೃತಿ**' ಎಂಬ ಗ್ರಂಥ ಚಾರಿತ್ರಿಕವಾಗಿಯೂ, ಆಧ್ಯಾತ್ಮಿಕ ಮಹತ್ವದಿಂದಲೂ ಅತ್ಯಂತ ಮುಖ್ಯವಾದ ಒಂದು ಗ್ರಂಥವಾಗಿದೆ. ಇಂಗ್ಲಿಷ್‌ನಲ್ಲಿ ಇದು ' The Story of an Epoch' ಎಂದು ಈಗಾಗಲೇ ಪ್ರಕಟವಾಗಿದೆ. ಈ ಕೃತಿಯನ್ನು ಈ ಸಂಚಿಕೆಯಿಂದ ಧಾರಾವಾಹಿಯಾಗಿ ನೀಡುತ್ತಿದ್ದೇವೆ. ಮೂಲ ಬಂಗಾಳಿಯಿಂದ ಇದನ್ನು ಸಮರ್ಪಕವಾಗಿ ಕನ್ನಡಕ್ಕೆ ಅನುವಾದಿಸಿರುವ ಲೇಖಕಿ, ಶ್ರೀಶಾರದಾ ಮಠದ ಶೈಕ್ಷಣಿಕ ಸೇವಾಕೇಂದ್ರವಾದ ತುಮಕೂರಿನ ಜುಂಜರಾಮನ ಹಳ್ಳಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

### ಪ್ರಸ್ತಾವನೆ

ಶ್ರೀರಾಮಕೃಷ್ಣ ಮಹಾಸಂಘದ ಆರನೇ ಅಧ್ಯಕ್ಷರಾಗಿದ್ದ ಪರಮ ಪೂಜ್ಯ ಸ್ವಾಮಿ ಸ್ವಾಮಿ ವಿರಜಾನಂದರು ತಮ್ಮ ಆಧ್ಯಾತ್ಮಿಕ ಜೀವನವನ್ನು ಶ್ರೀರಾಮಕೃಷ್ಣ ಭಕ್ತವಲಯದ ಸಾನ್ನಿಧ್ಯಕ್ಕೆ ಬಂದು ಪ್ರಾರಂಭಿಸಿದಲ್ಲಿಂದ ತೊಡಗಿ, ಅವರ ಜೀವನದ ಅಂತಿಮ ಕಾಲದವರೆಗೆ, ೬೦ ವರ್ಷಗಳ ಸುದೀರ್ಘ ಅವಧಿಯ ರಾಮಕೃಷ್ಣ ಮಹಾಸಂಘದ ವಿಕಾಸ ಮತ್ತು ಸ್ಥಿತಿ-ಗತಿಗಳೇ ಈ ಗ್ರಂಥದ ಹಿನ್ನೆಲೆ. ಒಬ್ಬ ವಿಶೇಷ ವ್ಯಕ್ತಿಯ ಜೀವನಚರಿತ್ರೆಯ ಚಿತ್ರಣವೇ ಈ ಪುಸ್ತಕದ ಗುರಿಯಲ್ಲ; ಆ ದೃಷ್ಟಿಯಿಂದ, ಸಾಮಾನ್ಯ ಅರ್ಥದಲ್ಲಿ ಇದನ್ನೊಂದು ಜೀವನ ಚರಿತ್ರೆ ಎಂದು ಹೇಳಲಾಗದು. ಅಲ್ಲದೆ ಒಂದು ಮಹಾಸಂಘದ ಕ್ರಮವಾದ ಘಟನಾವಳಿಗಳ ವರ್ಣನೆ ಹಾಗೂ ವಿಶ್ಲೇಷಣೆ ಮಾಡುವ ಪ್ರಯತ್ನವನ್ನೂ ಮಾಡಿಲ್ಲ. ಆದ್ದರಿಂದ ಇದು ಐತಿಹಾಸಿಕ ಗ್ರಂಥಗಳ ಸಾಲಿಗೂ ಸೇರಿಲ್ಲ. ಬದಲಾಗಿ, ಹಿಂದೆ ಹೇಳಿದಂತೆ, ಸ್ವಾಮಿ ಸ್ವಾಮಿ ವಿರಜಾನಂದರ ಜೀವನ ಹಾಗೂ ಸಾಧನೆಯ ಬಗ್ಗೆ ಕೆಲವೊಂದು ಆಯ್ದ ಸಮಕಾಲೀನ ಘಟನೆಗಳ ಪ್ರತಿಬಿಂಬವಿದು.

ಶ್ರೀರಾಮಕೃಷ್ಣ ಮಹಾಸಂಘದ ಪ್ರಧಾನ ಕಾರ್ಯದರ್ಶಿಗಳಾದ ಪೂಜ್ಯ ಮಾಧವಾನಂದರು ಮತ್ತು ಬೇಲೂರಿನ ಶ್ರೀರಾಮಕೃಷ್ಣ ಮಿಷನ್ನಿನ ವಿದ್ಯಾಮಂದಿರದ ಅಧ್ಯಕ್ಷರಾದ ಸ್ವಾಮಿ ತೇಜಸಾನಂದರು ಈ ಗ್ರಂಥದ ಕರಡಚ್ಚಿನ ಬಹುಭಾಗವನ್ನು ಓದಿ, ಅಗತ್ಯ ಕಂಡಲ್ಲಿ ಸಂಸ್ಕರಣವನ್ನು ಮಾಡುವುದರ ಮೂಲಕ ಗ್ರಂಥದ ಗೌರವವನ್ನು ಹೆಚ್ಚಿಸಿದ್ದಾರೆ. ಈ ಪುಸ್ತಕದ ಲಾಭಾಂಶವನ್ನು ಬೇಲೂರು ಮಠದ ಶಿಕ್ಷಣ ಕೇಂದ್ರಕ್ಕಾಗಿ ಮೀಸಲಾಗಿಟ್ಟಿದೆ. ಇತಿ ವಿನೀತನಾದ,

– ಲೇಖಕ

೧

ಧರೆಯ ರಭಸವಾದ ಘಟನಾ ಪ್ರವಾಹವು ತನ್ನದೇ ಆದ ವೇಗವನ್ನನುಸರಿಸಿ ಹರಿಯುತ್ತಿದೆ. ಮಾನವ ಆದರೊಂದಿಗೆ ಓಡಿ ಸರಿಗಟ್ಟಲಾರ. ನೋಡನೋಡುತ್ತಲೇ ಅವು ಎಲ್ಲಿಗೆ ಹೋಗಿ ಸೇರುತ್ತವೆ ಎಂಬುದನ್ನು ಊಹಿಸಲೂ ಆಗದೆ, ಅವನು ಮೂಕನಾಗಿ ಹಿಂದೆಯೇ ಉಳಿಯುತ್ತಾನೆ. ಆದರೂ ಅವನು ಸೋಲನ್ನೊಪ್ಪುವುದಿಲ್ಲ; ಕಳೆದು ಹೋದ ಘಟನೆಗಳಿಗೆ ತನ್ನ ಸ್ಮೃತಿಪಟಲದಲ್ಲಿ ಆಶ್ರಯವನ್ನಿತ್ತು ಹೊಸತಾದ ಕೌಶಲದಿಂದ ಅದನ್ನು ಹಿಡಿದಿಟ್ಟಿರುತ್ತಾನೆ. ನೆನಪಿಗೆ ನಾಶ

ವಿಲ್ಲ. ಮರೆಯಲ್ಲಿದ್ದುಕೊಂಡು, ಆಗಾಗ ತೆರೆಗೆ ಬರುತ್ತಾ ಜೀವನದ ಕಣಕಣವನ್ನೂ ಅದು ಸಮೃದ್ಧಗೊಳಿಸುತ್ತದೆ. ಮನುಷ್ಯನೊಬ್ಬ ಮೃತ್ಯುವಶನಾದರೂ ಅವನು ಇತರರಿಗಾಗಿ ತನ್ನಲ್ಲಿ ಸಂಗ್ರಹವಾದ ನೆನಪುಗಳನ್ನು ಬಿಟ್ಟು ಹೋಗುತ್ತಾನೆ. ಅದನ್ನು ಆಧರಿಸಿ ಇತರರು ನಕ್ಕು ನಲಿದು, ಅತ್ತು ಕರೆದು, ಓಡಾಡಿ ಜೀವನದ ಔನ್ನತ್ಯವನ್ನು ತಲುಪುತ್ತಾರೆ. ನೆನಪು ಎಂಬುದು ಇರುವುದರಿಂದ ಮಾನವನು ಕಾಲ, ಜಗತ್ತು ಹಾಗೂ ಜೀವನ ಇವೆಲ್ಲವನ್ನೂ ಗೆಲ್ಲಬಲ್ಲ.

ಘಟನೆಗಳು ನಡೆದಾಗ ಅದರಲ್ಲಿ ಆಸಕ್ತಿ–ವಿರಕ್ತಿ, ಸುಖ–ದುಃಖ, ಭಯ–ಸಂದೇಹ, ರೂಪ–ಕುರೂಪಗಳು ಅಡಕವಾಗಿರುತ್ತವೆ. ಆದರೆ ನೆನಪಿನಲ್ಲಿ ಈ ದ್ವಂದ್ವವಿರುವುದಿಲ್ಲ. ನೆನಪನ್ನು ನಾವು ರಾಗ–ದ್ವೇಷದಿಂದ ಮುಕ್ತವಾದ ದೃಷ್ಟಿಕೋನದಿಂದ ನೋಡುತ್ತೇವೆ. ಇದರಲ್ಲಿ ಏನೋ ಒಂದು ರೀತಿಯ ಸ್ನಿಗ್ಧ ಮಾಧುರ್ಯ ತುಂಬಿರುತ್ತದೆ.

ನೆನಪುಗಳಿಗೆ ಹಿನ್ನೆಲೆಯೇ — 'ಸತ್ಯ–ಶಿವ–ಸುಂದರ.'

* * *

ಒಂದು ಶತಮಾನಕ್ಕೆ ಹಿಂದೆ, ಕಾಲಗರ್ಭದಲ್ಲಿ ಅಡಗಿಹೋದ ಅಸಂಖ್ಯ ವ್ಯಕ್ತಿಗಳ ನಡುವಿನಿಂದ ಇಬ್ಬರು ವೃದ್ಧರನ್ನು ಸ್ಮೃತಿಪಟಲಕ್ಕೆ ಎಳೆದು ತರುತ್ತೇನೆ. ಇವರಿಬ್ಬರೂ ಕೊಲ್ಕತ್ತಾ ನಿವಾಸಿಗಳು, ಮೇಲಾಗಿ ಬೀಗರು. ಅವರಲ್ಲೊಬ್ಬ ರಾಮರತನ ಬಸು. ಈತನು ಉದ್ಯೋಗದ ನಿಮಿತ್ತ ೨೪ ಪರಗಣ ಜಿಲ್ಲೆಯಲ್ಲಿರುವ ಕೊದಾಲಿಯಾ ಗ್ರಾಮದ ತನ್ನ ಪೂರ್ವಿಕರ ಮನೆಯನ್ನು ಬಿಟ್ಟು ಕೊಲ್ಕತ್ತೆಗೆ ಬಂದು, ಸಿಮ್ಲಾ ಎಂಬಲ್ಲಿ ವಾಸವಾಗಿದ್ದನು. ಅವನು ಬಹಳ ದಿನಗಳಿಂದ ವಿಧುರ. ತನ್ನ ದೂರದ ಸಂಬಂಧಿ ಸೋದರನ ಪತ್ನಿಯ ಸಹಾಯದಿಂದ ತನ್ನ ಒಬ್ಬಳು ಮಗಳು ಹಾಗೂ ಐವರು ಗಂಡುಮಕ್ಕಳನ್ನು ಬೆಳೆಸಿದ್ದ. ಅವನು ಜೀವನದಲ್ಲಿ ಅನೇಕ ಆಘಾತಗಳನ್ನೂ, ಕಷ್ಟ–ನಷ್ಟಗಳನ್ನೂ ಸಹಿಸಿದ್ದ. ಅವನ ಎರಡನೇ ಮಗ ೧೫ನೇ ವಯಸ್ಸಿನಲ್ಲಿ ಕಠಿಣ ರೋಗಕ್ಕೆ ತುತ್ತಾದಾಗ ಅವನ ಸೇವೆ, ಶುಶ್ರೂಷೆಗಳಿಗಾಗಿ ಸದಾ ಮನೆಯಲ್ಲಿರ ಬೇಕಾಗಿ ಬಂತು. ಅದಕ್ಕೆ ರಜೆ ಕೇಳಿದಾಗ ಸಾಹೇಬ ಕೊಡಲಿಲ್ಲ. ಒಂದು ದಿನ ಕಛೇರಿಯಿಂದ ಮನೆಗೆ ಬರುವಷ್ಟರಲ್ಲಿ ಮಗನ ಪ್ರಾಣಪಕ್ಷಿ ಹಾರಿಹೋಗಿತ್ತು. ಅವನು ಅಂದಿನಿಂದಲೇ ಕೆಲಸಕ್ಕೆ ತಿಲಾಂಜಲಿ ಯಿತ್ತು, ಸ್ವಂತ ವ್ಯಾಪಾರ ಪ್ರಾರಂಭಿಸಿದ; ಬಹಳಷ್ಟು ಹಣವನ್ನೂ ಗಳಿಸಿದ. ಈತ ಕಾಳೀಭಕ್ತನಾಗಿದ್ದ. ಅವನು ಸದಾ ಕಾಳೀಮಾತೆಯನ್ನು ಧ್ಯಾನಿಸುತ್ತಿದ್ದ. ವೃದ್ಧಾಪ್ಯದಲ್ಲಿ ಬೇಕಾದಷ್ಟು ವಿರಾಮದ ಸಮಯವನ್ನು ಚದುರಂಗದಾಟದಲ್ಲಿ ಕಳೆಯುತ್ತಿದ್ದ. ರಾಮರತನನ ಸಹೃದಯತೆ ಹಾಗೂ ತೀಕ್ಷ್ಣಬುದ್ಧಿಯಿಂದಾಗಿ ನೆರೆ ಹೊರೆಯವರು ಅವನನ್ನು ಗೌರವಿಸುತ್ತಿದ್ದರು. ಅಲ್ಲದೆ ಆಪತ್ತಿನಲ್ಲಿ ಆತನ ಸಲಹೆಯನ್ನೂ ಅಪೇಕ್ಷಿಸುತ್ತಿದ್ದರು. ರಾಮರತನನು ಸ್ನೇಹಶೀಲನೇ ಆದರೂ ಸ್ವಲ್ಪ ಮುಂಗೋಪಿಯಾಗಿದ್ದ. ತನ್ನ ಮೊದಲನೆಯ ಮಗನಾದ ತ್ರೈಲೋಕ್ಯನಾಥನಿಗೆ ವೈದ್ಯಕೀಯ ವ್ಯಾಸಂಗ ಮಾಡಿಸಿದ್ದ. ಓದುತ್ತಿರುವಾಗಲೇ ಅವನಿಗೆ ಮದುವೆ ಮಾಡಿಸಿದ್ದ. ಬಾಲಕಿಯಾದ ವಧು ನಿಷಾದಕಾಲಿ ಗಂಡನ ಮನೆಗೆ ಬಂದು, ಅತ್ತೆಯಿಲ್ಲದ ಮನೆಯ ಸಂಸಾರ ನಿರ್ವಹಣೆಯನ್ನು ವಹಿಸಿಕೊಂಡಳು. ಇವಳು ವಿನೋದವಿಹಾರಿ ಮಿತ್ರನ ಮಗಳು.

ಬೀಗನಾದ ವಿನೋದವಿಹಾರಿ ಮಿತ್ರನು ಆಹಿರಿಟೊಲಾದ ಕುಲೀನ ಗೃಹಸ್ಥ. ಆತನದು ಶಾಂತ, ಗಂಭೀರ ಪ್ರಕೃತಿ. ಎಲ್ಲರ ಬಗ್ಗೆ ಅವನಿಗೆ ಉದಾರ ಪ್ರೀತಿಯಿತ್ತು. ಆತನ ದೈನಂದಿನ ಜೀವನದ ನಿಖರ–ನಿಯಮ–ನಿಷ್ಠೆ, ಸಂಯಮ ಮತ್ತು ಅಚ್ಚುಕಟ್ಟುತನ ಸಹಜವಾಗಿಯೇ ಎಲ್ಲರ ಕಣ್ಣಿಗೂ ಬೀಳುತ್ತಿತ್ತು. ವೃದ್ಧಾಪ್ಯದಲ್ಲಿಯೂ ದಂಡ–ಬೈಠಕ್ ಹೊಡೆಯುತ್ತಿದ್ದ, ಸಂಜೆ ೪–೫ ಮೈಲಿ ತಿರುಗಾಡಿ ಬರುತ್ತಿದ್ದ. ಹಾಗೆಯೇ ತನ್ನ ಮೂವರು ಹೆಣ್ಣು ಮಕ್ಕಳನ್ನು ಸರದಿ ಪ್ರಕಾರ ಭೇಟಿಯಾಗಿ ಬರುತ್ತಿದ್ದ. ಅವನು ಎರಡನೇ ಮಹಡಿಯ ತಾರಸಿಯ ಮೇಲೆ ಅನೇಕ ಕುಂಡಗಳಲ್ಲಿ ಹೂವಿನ ಗಿಡಗಳನ್ನು ಬೆಳೆಸಿದ್ದ. ತಾನೇ ಸ್ವತಃ ಕೆಳಗಿಂದ ಬಾಲ್ದಿಯಲ್ಲಿ ನೀರು ತುಂಬಿಕೊಂಡು ಆ ಗಿಡಗಳಿಗೆ ಬಹಳ ವಾತ್ಸಲ್ಯದಿಂದ ನೀರೆರೆಯುತ್ತಿದ್ದ. ೧೦–೧೨ ಜೋಡಿ ಬೂಟುಗಳನ್ನು ತಾನೇ ಮೆರಗು ಮಾಡುತ್ತಿದ್ದ. ತಂಬಾಕಿನೊಂದಿಗೆ ಬೆರಸಲು ನಾನಾ ಬಗೆಯ ಸುವಾಸನೆಯ ಪುಡಿಗಳನ್ನು ತಯಾರಿಸಿ, ಮಡಕೆಗಳಲ್ಲಿ ಅದರ ಮಿಶ್ರಣಗಳನ್ನು ತುಂಬಿ ಮಣ್ಣಿನಲ್ಲಿ ಹೂತಿಡುತ್ತಿದ್ದ. ದಿನನಿತ್ಯದ ವ್ಯವಹಾರಕ್ಕೆ ಬೇಕಾಗುತ್ತಿದ್ದ ತಂಬಾಕನ್ನು ಚಿಲುಮೆಗಳಲ್ಲಿ ತುಂಬಿಸಿ ಸಾಲಾಗಿ ಜೋಡಿಸಿಡುತ್ತಿದ್ದ. ಇದಲ್ಲದೆ ದಿನವೂ ಒಂದು ಲಕ್ಷ ಹರಿ ನಾಮ ಜಪವನ್ನು ತಪ್ಪದೆ ಮಾಡುತ್ತಿದ್ದ. ಅನವಶ್ಯಕವಾಗಿ ಮಾತನಾಡುತ್ತಿರಲಿಲ್ಲ, ಇತರರನ್ನು ಕುರಿತ ಚರ್ಚೆಯಲ್ಲಿ ಭಾಗವಹಿಸುತ್ತಿರಲಿಲ್ಲ. ಸುಸಂಸ್ಕೃತ ಅಭಿರುಚಿಯವನೂ, ಕಾರ್ಯಕುಶಲನೂ, ಸ್ವಾವಲಂಬಿಯೂ, ಭಗವನ್ನಿಷ್ಠನೂ ಆದ ವಿನೋದ ವಿಹಾರಿಯ ಪ್ರಶಾಂತ ವ್ಯಕ್ತಿತ್ವವು ಆತನ ಪರಿವಾರದವರೆಲ್ಲರ ಮನವನ್ನು ಸೆಳೆದಿತ್ತು. ಆತನ ಸಂಸಾರವು ನಿಜಕ್ಕೂ ಶಾಂತಿ–ಸಾಮರಸ್ಯದಿಂದ ಪರಿಪೂರ್ಣವಾಗಿತ್ತು.

ಈ ಇಬ್ಬರು ವೃದ್ಧರ ಸ್ವಭಾವದಲ್ಲಿ ವೈಪರೀತ್ಯಗಳಿದ್ದರೂ, ಅವರ ಗೆಳೆತನಕ್ಕೇನೂ ಕುಂದುಂಟಾಗಿರಲಿಲ್ಲ. ಬಸು ಮಹಾಶಯನು ತನ್ನ ಬೀಗನಾದ ವಿನೋದವಿಹಾರಿ ಮಿತ್ರನನ್ನು ಚದುರಂಗದಾಟಕ್ಕೆ ಎಳೆಯಲು ಪ್ರಯತ್ನ ಮಾಡುತ್ತಿದ್ದ; ಆತನಾದರೋ ಮಂದಹಾಸ ಬೀರಿ ನಿರಾಕರಿಸಿಬಿಡುತ್ತಿದ್ದ. ಮಿತ್ರನಾದರೊ ವಿಧುರನಾದ ತನ್ನ ಬೀಗನ ಹಿಡಿತವಿಲ್ಲದ ಸಂಸಾರದಲ್ಲಿ ಶೃಂಖಲತೆ, ಸಾಮರಸ್ಯಗಳನ್ನು ತರಲು ಉಪದೇಶವೀಯುತ್ತಿದ್ದ. ರಾಮರತನನ ಬೇಸತ್ತ ಮನಸ್ಸಿಗೆ ಅದೆಷ್ಟು ಉಪದೇಶಗಳು ಹಿಡಿಸುತ್ತಿದ್ದವೋ ತಿಳಿಯದು. ಚದುರಂಗದಾಟದ ಗುಂಗಿನಲ್ಲಿ ನೋಡನೋಡುತ್ತಾ ಉಪದೇಶಗಳೆಲ್ಲ ಎಲ್ಲೋ ಕರಗಿ ಹೋಗುತ್ತಿದ್ದವು. ಆತ 'ಹೋಹೋ' ಎಂದು ನಗುತ್ತ, ''ಅಯ್ಯೋ! ಬೀಗರೇ, ಇನ್ನೂ ಸಂಸಾರವೇ! ಮಗ–ಸೊಸೆಯಂದಿರು ಸಂಬಾಳಿಸಲಿ ಬಿಡಿ, ನನಗ್ಯಾಕಿನ್ನು?'' ಎನ್ನುತ್ತಿದ್ದ.

ಆದರೆ ಅಂತರಿಕ್ಷದಲ್ಲಿ ವಿಧಿ, 'ಓ ವೃದ್ಧ, ಇಷ್ಟಕ್ಕೆ ವೈರಾಗ್ಯ ತಾಳಿದರಾದೀತೆ? ಇನ್ನೂ ಎಷ್ಟೋ ಆಘಾತಗಳು ನಿನಗಾಗಿ ಕಾಯುತ್ತಿವೆಯಲ್ಲಾ!' ಎಂದು ತನ್ನಲ್ಲೇ ನಕ್ಕ.

ಕ್ರಿ.ಶ. ೧೮೭೫ರ ಜೂನ್ ೧೦, ಮಂಗಳವಾರ; ಪುರೀಕ್ಷೇತ್ರದ ಶ್ರೀಜಗನ್ನಾಥದೇವನ ಸ್ನಾನಯಾತ್ರೆಯ ದಿನ. ಅಂದು ಆ ವೃದ್ಧರಿಬ್ಬರ ಮನಸ್ಸು ಸಂತಸ–ಉಲ್ಲಾಸದಿಂದ ತುಂಬಿತ್ತು. ಏಕೆಂದರೆ ಬೆಳಿಗ್ಗೆ



ಎಂಟರ ವೇಳೆಗೆ ಆಹಿರಿಟೋಲಾದ ವಿನೋದವಿಹಾರಿಯ ಮನೆಯಲ್ಲಿ ರಾಮರತನನ ಮೊದಲ ಮೊಮ್ಮಗ – ವಿನೋದ ವಿಹಾರಿಯ ಎರಡನೇ ಮಗಳ ಮೊದಲ ಮಗು ಜನ್ಮ ತಾಳಿದೆ. ತಾತನಾದ ರಾಮರತನ ಉದ್ವೇಗದಿಂದ ಹೇಳಿದ ''ಕಾಳಿ, ಕಾಳಿ – ತಾಯೆ! ಮಗುವನ್ನು ದೀರ್ಘಾಯುವನ್ನಾಗಿ ಮಾಡು. ಅವನಿಂದ ವಂಶದ ಬೆಳಕು ಉಜ್ವಲವಾಗಿ ಬೆಳಗಲಿ!'' ಅಜ್ಜನ (ತಾಯಿಯ ತಂದೆ) ಅಂತರಾಳದಿಂದ ಗಭೀರ ಪ್ರಾರ್ಥನೆಯೊಂದು ಹೊರಟಿತು ''ಕೃಷ್ಣ – ನಾರಾಯಣ–ಹರಿ! ಮಗು ಉತ್ತಮ ಪುರುಷನಾಗಿ ಬೆಳೆಯಲಿ, ಭಕ್ತನಾಗಲಿ'' ಎಂದು. ಶಿಶುವಿಗೆ ಕಾಳೀಕೃಷ್ಣನೆಂದು ನಾಮಕರಣ ಮಾಡಿದರು. ಮಗುವನ್ನು ಕರೆದರೆ ಅಜ್ಜ–ತಾತಂದಿರಿಬ್ಬರಿಗೂ ತಮ್ಮ ತಮ್ಮ ಆರಾಧ್ಯ ದೇವತೆಯ ನೆನಪಾಗುತ್ತಿತ್ತು.

ಶಿಶುವು ತಾಯಿಯ ಮೊಲೆಹಾಲು ಕುಡಿಯುತ್ತಿರಲಿಲ್ಲ. ಇದರಿಂದಾಗಿ ತಾತನು ಒಂದು ಒಳ್ಳೆಯ ಹಸುವನ್ನು ಕೊಂಡು ತಂದನು. ಅದರ ಹಾಲನ್ನು ಮೊಮ್ಮಗನಲ್ಲದೆ ಇನ್ಯಾರೂ ಕುಡಿಯುವಂತಿರಲಿಲ್ಲ; ಅದು ತಾತನ ಬಿಗಿ ನಿಯಮ. ತಾನೇ ಸ್ವತಃ ಆ ಗೋವಿನ ಸೇವೆ ಮಾಡುತ್ತಿದ್ದ. ಮಗುವು ರಾತ್ರಿಯೆಲ್ಲಾ ನಿದ್ರಿಸುತ್ತಿರಲಿಲ್ಲ; ಹಗಲಲ್ಲಿ ಮಲಗುತ್ತಿತ್ತು. ರಾತ್ರಿ ವೇಳೆ ಮಲಗಿಸಲು ಹೋದರೆ ಅತ್ತು ಬೊಬ್ಬಿಡುತ್ತಿತ್ತು. ಯಾರಾದರೊಬ್ಬರು ಮಗುವನ್ನು ಎತ್ತಿಕೊಂಡು ತಾರಸಿಯಲ್ಲಿ ಚಂದಮಾಮನನ್ನು ತೋರಿಸುತ್ತಾ ಸುತ್ತಾಡಬೇಕಿತ್ತು; ಇಲ್ಲವೇ ಮಡಿಲಲ್ಲಿಟ್ಟು ತೂಗುತ್ತಾ ಮಲಗಿಸುವ ಪ್ರಯತ್ನ ಮಾಡಬೇಕಿತ್ತು.

ಮೊಮ್ಮಗನ ಜನನವಾಗಿ ಒಂದು ವರ್ಷದೊಳಗೆ ಮಗನಾದ ತ್ರೈಲೋಕ್ಯನಾಥನು ಎಲ್.ಎಮ್.ಎಸ್. ಎಂಬ ವೈದ್ಯಕೀಯ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ, ಮಹಿಷಾದಳದ ರಾಜ್‌ಸ್ಟೇಟ್ ಎಂಬಲ್ಲಿ ೧೫೦ ರೂಪಾಯಿ ಸಂಬಳದ ಕೆಲಸ ದೊರಕಿಸಿಕೊಂಡನು. ಈ ಬಾಲಕನ ಆಗಮನವು ಸಂಸಾರದ ಸಿರಿ–ಸಂಪತ್ತಿನ ವೃದ್ಧಿಯ ಸೂಚನೆ ಎಂದು ಭಾವಿಸಿದ ವೃದ್ಧನ ಆನಂದಕ್ಕೆ ಪಾರವೇ ಇರಲಿಲ್ಲ; ಮಗುವಿನ ಮೇಲೆ ಆತನ ಸ್ನೇಹಾದರಗಳು ಬೆಳೆಯುತ್ತಲೇ ಹೋದವು. ಭವಿಷ್ಯದ ಸುಂದರ ಕನಸುಗಳು ಅವನ ಮನಸ್ಸನ್ನು ಉತ್ತೇಜಿಸುತ್ತಿದ್ದವು. ಇತ್ತ ಮಗು ಹಸುವಿನ ಹಾಲನ್ನು ಚೆನ್ನಾಗಿ ಕುಡಿದು, ತನ್ನ ವಯಸ್ಸಿನ ಮಕ್ಕಳಿಗಿಂತ ಹೆಚ್ಚು ದಷ್ಟಪುಷ್ಟವಾಗಿ ಬೆಳೆದಿತ್ತು. ತಾತನು ಮಗುವಿಗಾಗಿ ಮೈತುಂಬ ಒಡವೆಗಳನ್ನು ಮಾಡಿಸಿ ತಂದನು.

ಈ ರೀತಿ ಸಂಗೀತ ಕಳೆ ಕಟ್ಟುತ್ತಿರುವಾಗ, ಇದ್ದಕ್ಕಿದ್ದಂತೆಯೇ ಲಯ ತಪ್ಪಿಹೋಯಿತು. ಚದುರಂಗದ ಕಾಯಿಗಳನ್ನು ನಡೆಸುವಲ್ಲಿ ತಾತನು ಒಂದು ದೊಡ್ಡ ತಪ್ಪು ಮಾಡಿದ್ದರಿಂದ ಅನಿರೀಕ್ಷಿತವಾಗಿ ಆಟ ಭಂಗವಾಯಿತು. ಈಗ ಹಿರಿಯ ಸೊಸೆ ತನ್ನ ಮೂಗಿನ ನೇರಕ್ಕೆ ನಡೆಯುವ ವೃದ್ಧನ ಕೋಪಕ್ಕೆ ತುತ್ತಾಗಿದ್ದಾಳೆ. ಅತ್ಯಂತ ಸಹಿಷ್ಣುವೂ, ಶ್ರಮಜೀವಿಯೂ, ಸೇವಾಪರಾಯಣೆಯೂ ಆದ ನಿಷಾದಕಾಲಿಗೆ ಏನು ಮಾಡಿದರೂ ಮಾವನನ್ನು ಸಮಾಧಾನಪಡಿಸಲಾಗುತ್ತಿರಲಿಲ್ಲ. ಸಣ್ಣಪುಟ್ಟ ಕಾರಣಗಳಿಗೂ ವೃದ್ಧನು ಸೊಸೆಯಲ್ಲಿ ದೋಷವನ್ನು ಹುಡುಕಿ ಮತ್ತೆ ಮತ್ತೆ ಮಗನ ಬಳಿ ಚಾಡಿ ಹೇಳುತ್ತಿದ್ದ. ಗಲಾಟೆ ಎಬ್ಬಿಸಿ ದಿನದಿನವೂ ಅಶಾಂತಿ ಸೃಷ್ಟಿಸುತ್ತಿದ್ದ. ವಿಧೇಯನೂ, ಸಾಧು ಸ್ವಭಾವದವನಾದ ತ್ರೈಲೋಕ್ಯನ ಮೃದುವಾದ ಮಧ್ಯಸ್ಥಿಕೆ ಯಾವ ಕೆಲಸಕ್ಕೂ ಬರಲಿಲ್ಲ. ಬೇರೆ ದಾರಿಕಾಣದೆ ಅವನು ಹೆಂಡತಿ ಹಾಗೂ ಎರಡು ವರ್ಷದ ಮಗ ಕಾಳೀಕೃಷ್ಣನನ್ನು ಕರೆದುಕೊಂಡು ಬೇರೆ ಸಂಸಾರ ಹೂಡಿದನು. ಅಷ್ಟುಹೊತ್ತಿಗೆ ಅವನು ಹಿಂದಿನ ಕೆಲಸ ತೊರೆದಿದ್ದ. ಕೆಲವು ದಿನ ಜಯನಗರದಲ್ಲಿ ವೈದ್ಯನಾಗಿ ಸೇವೆ ಸಲ್ಲಿಸಿದ. ನಂತರ ಕೊಲ್ಕತ್ತೆಯ ೮೭, ಅಮ್‌ಹರ್ಸ್ಟ್ ಸ್ಟ್ರೀಟಿನಲ್ಲಿ 'ದಿ ಈಸ್ಟರ್ನ್ ಮೆಡಿಕಲ್ ಹಾಲ್' ಎಂಬ ಹೆಸರಿನ ಸ್ವಂತ ಚಿಕಿತ್ಸಾಲಯವನ್ನು ತೆರೆದು, ಅದರ ಒಳಭಾಗದಲ್ಲೇ ಸಂಸಾರ ಹೂಡಿದ. ತನ್ನ ಪ್ರಾಣ ಪುತ್ಥಲಿಯಾದ ಮೊಮ್ಮಗನು ಎಂದು ತನ್ನಿಂದ ದೂರವಾದನೋ ಅಂದೇ ಅವನಿಗಾಗಿ ತಂದಿದ್ದ ತನ್ನ ನೆಚ್ಚಿನ ಹಸುವನ್ನು ತಾತನು ರಸ್ತೆಗೆ ಬಿಟ್ಟುಬಿಟ್ಟ.

* * *

ಬಾಲ್ಯದ ನೆನಪುಗಳು ಸ್ವಲ್ಪ ಸ್ವಲ್ಪವಾಗಿ ವಾರ್ಧಕ್ಯದ ತೀರಕ್ಕೆ ಇದ್ದಕ್ಕಿದ್ದಂತೆ ತೇಲಿಬರುವುದುಂಟು. ಆಶ್ಚರ್ಯ! ಅಷ್ಟೊಂದು ಸುದೀರ್ಘ ಕಾಲದ ಮರೆಯಲ್ಲಿದ್ದರೂ ಅವುಗಳ ಬಣ್ಣ ಸ್ವಲ್ಪವೂ ಮಾಸಿರುವುದಿಲ್ಲ.....

ತಂದೆಯ ಚಿಕಿತ್ಸಾಲಯದ ಒಂದು ಮೂಲೆಯಲ್ಲಿ ಒಂದು ಸೀಮೆಎಣ್ಣೆಯ ಟಿನ್ನಿತ್ತು. ದಿನವೂ ಸಂಜೆ ಅದರಿಂದ ಅದೇನೋ ನೀರಿನಂತಹುದನ್ನು ಬಾಟಲಿಯಲ್ಲಿ ಸುರಿಯುತ್ತಿದ್ದರು. ಅಲ್ಲಿಂದ ಮತ್ತೆ ಲ್ಯಾಂಪಿಗೆ. ಬತ್ತಿಯನ್ನು ಉರಿಸಿದೊಡನೆಯೇ ಮನೆ ಬೆಳಗುತ್ತಿತ್ತು. ಶಿಶುವಿನ ಮನದಲ್ಲಿ ಆ ಟಿನ್ನು ಒಂದು ಅದ್ಭುತ ರಹಸ್ಯವೇ ಆಗಿತ್ತು. ಒಂದು ದಿನ ಮನೆಯಲ್ಲಿ ಯಾರೂ ಇಲ್ಲದಾಗ ಮಗು ಮೆಲ್ಲನೆ ಟಿನ್ ಬಳಿಗೆ ಹೋಯಿತು. ಅದರ ಒಂದು ಮೂಲೆಯಲ್ಲಿ ಒಂದು ಕಿಂಡಿಯಿದೆ; ಅಲ್ಲಿಂದ ಒಂದು ರೀತಿಯ ವಿಚಿತ್ರ ವಾಸನೆ ಬರುತ್ತಿದೆ! ಮಗು ತನ್ನ ಪುಟ್ಟ ಕೈಗಳನ್ನು ಆ ಕಿಂಡಿಯೊಳಗಿಟ್ಟು, ಆ

ರಹಸ್ಯ ಪದಾರ್ಥದ ಸ್ವರೂಪವನ್ನು ಪರೀಕ್ಷಿಸಲು ಕೈಯನ್ನು ಬಾಯಿಗಿಟ್ಟು ರುಚಿ ನೋಡಿಯೇ ಬಿಟ್ಟಿತು. ತಲೆಯಲ್ಲಿ, ಮೈಯಲ್ಲಿ ಏನೋ ಒಂದು ರೀತಿಯ ತಳಮಳ. ಅಷ್ಟರಲ್ಲಿ ತಂದೆ ಬಂದು ಸೀಮೆಎಣ್ಣೆ ನಿರೋಧಕ ಔಷಧಿ ಕೊಟ್ಟು ಮಗುವನ್ನು ಅಪಾಯದಿಂದ ಪಾರು ಮಾಡಿದರು.

ದಿನದಿನವೂ ನೋಡುತ್ತಿದ್ದ ಮತ್ತೊಂದು ದೃಶ್ಯ ನೆನಪಿಗೆ ಬರುತ್ತದೆ. ಒಬ್ಬ ಅಂಧ ಬಾಲಕನನ್ನು ಆತನ ತಾಯಿ ಕೈಹಿಡಿದು ಕರೆತಂದು ರಸ್ತೆಯ ಪಕ್ಕದಲ್ಲಿ ಕೂರಿಸಿ ಹೋಗುತ್ತಿದ್ದಳು. ಆತನು ಗೆಜ್ಜೆ ಕಟ್ಟಿಕೊಂಡಿದ್ದ. ತನ್ನ ಒಂದು ಕೈಯನ್ನು ದೊಡ್ಡ ಮಣ್ಣಿನ ಕೊಡದ ಒಳಗಿಳಿಸಿ, ಬಾರಿಸುತ್ತಾ ಹಾಡುತ್ತಿದ್ದ. ಅವನ ಹಾಡು, ವಾದ್ಯ ತುಂಬ ಮಧುರವಾಗಿರುತ್ತಿತ್ತು. ನೋಡುತ್ತಿದ್ದಂತೆಯೆ ಜನರ ಗುಂಪು ಸೇರುತ್ತಿತ್ತು; ಅನೇಕರು ಪುಡಿಗಾಸು ಕೊಟ್ಟು ಹೋಗುತ್ತಿದ್ದರು.


ವಿಚಿತ್ರ ಬಟ್ಟೆ ಹಾಕಿಕೊಂಡಿದ್ದ ತಿಂಡಿ ಮಾರುವವನ ಚಿತ್ರವೂ ಕಣ್ಣಮುಂದೆ ತೇಲುತ್ತದೆ. ಒಂದು ಕಾಸಿನ ಪೊಟ್ಟಣದೊಳಗೆ ಏನೇನಿರುತ್ತದೆ ಎಂದು ಅವನು ಒಂದು ಚುಟುಕನ್ನು ರಾಗವಾಗಿ ಹಾಡುವ ಮೂಲಕ ತಿಳಿಸುತ್ತಿದ್ದ. ಬಹಳ ತಮಾಷೆಯ ಅವನ ಹಾಡನ್ನು ಕೇಳುವುದಕ್ಕಾಗಿ ಮನೆಮನೆಯ ಜನರು ಅವನನ್ನು ಕರೆದು ಒಂದೆರಡು ಕಾಸಿನ ತಿಂಡಿ ಖರೀದಿಸುತ್ತಿದ್ದರು. ಅವನ ಪದ್ಯದ ಒಂದೆರಡು ಸಾಲು ಈಗ ನೆನಪಿಗೆ ಬರುತ್ತದೆ:

**ಅಕ್ಕಿ ಅವಲಕ್ಕಿ, ಗಸಗಸೆ, ಕಡಲೆಪುರಿ ।**
**ಅದರಲ್ಲೇ ಇರುತ್ತೆ ಅರ್ಧ ಮೆಣಸಿನಕಾಯಿ ಮಸಾಲೆ ॥**

ತಮಾಷೆಯ ಘಟನೆಯೊಂದು ನೆನಪಿಗೆ ಬರುತ್ತದೆ. ದೂರದ ಸಂಬಂಧಿ ದೊಡ್ಡಪ್ಪ ಬೌಬಜಾರಿನಲ್ಲಿ ತಂಬಾಕಿನ ಅಂಗಡಿ ಇಟ್ಟಿದ್ದ. ಆಗಾಗ ದೊಡ್ಡಪ್ಪನಲ್ಲಿಗೆ ಹೋಗುತ್ತಿದ್ದದೂ ಉಂಟು. ಆಗಿನ್ನೂ ೬–೭ ವರ್ಷ ವಯಸ್ಸು. ಒಂದು ದಿನ ದೊಡ್ಡಪ್ಪ 'ಒಂದು ಸ್ವಲ್ಪ ಕುಳಿತಿರಪ್ಪ, ನಾನು ಈಗ ಬರ್ತೀನಿ' ಅಂತ ಹೇಳಿ ಹೋದ. ಆತ ಹೋದಾಗಲೇ ಒಬ್ಬ ಗಿರಾಕಿ ಎರಡು ಪೈಸೆಗೆ ತಂಬಾಕು ಕೊಂಡುಕೊಳ್ಳಲು ಬಂದ. ಆಗ ಈ ಹುಡುಗನೇ ಅತ್ಯುತ್ಸಾಹದಿಂದ ದಕ್ಷ ವ್ಯಾಪಾರಸ್ಥನಂತೆ ದುಡ್ಡು ತೆಗೆದುಕೊಂಡು ಸಾಮಾನು ಕೊಟ್ಟುಬಿಟ್ಟ. ದೊಡ್ಡಪ್ಪ ಬಂದು ''ಎಲ್ಲಿಂದ ಕೊಟ್ಟೆ?'' ಎಂದು ಕೇಳಿದಾಗ ಆತ, ''ಏಕೆ, ಆ ಡಬ್ಬದಿಂದ'' ಎಂದ. ದೊಡ್ಡಪ್ಪ ನಕ್ಕು ''ಥತ್! ಅದು ತಂಬಾಕಲ್ಲ; ಕಾಮಿರಾ (ತಂಬಾಕಿಗೆ ಹಾಕುವ ಸುವಾಸನೆಯ ಪುಡಿ)'' ಎಂದ.

ತನ್ನನ್ನು ತಾನೇ ಮರೆಯುತ್ತಿದ್ದ ಒಬ್ಬ ಚಿತ್ರಕಾರನ ನೆನಪೂ ಆಗುತ್ತದೆ. ಆತ ತಂದೆಯ ಚಿಕಿತ್ಸಾಲಯಕ್ಕೆ ಸೇರಿದಂತಿದ್ದ ಭಾಗವನ್ನು ಬಾಡಿಗೆಗೆ ತೆಗೆದುಕೊಂಡು ವಾಸವಾಗಿದ್ದ. ಯಾರೊಂದಿಗೂ ಬೆರೆಯದೆ ಅವನು ತನ್ನ ಪಾಡಿಗೆ ತಾನು ಚಿತ್ರ ಬಿಡಿಸುತ್ತಲೇ ಇರುತ್ತಿದ್ದ. ಆತ ತಂದೆಗೊಂದು ಚಿತ್ರವನ್ನು ಉಡುಗೊರೆಯಾಗಿ ಕೊಟ್ಟಿದ್ದ. ಅದರ ಭಾವವಾದರೋ ಬಹಳ ಸುಂದರವಾಗಿತ್ತು: ಮಹಾದೇವನು ಅರ್ಧನಿಮೀಲಿತ ನೇತ್ರನಾಗಿ ಹಿಮಾಲಯದ ಒಂದು ದೊಡ್ಡ ಮರದ ಬುಡದಲ್ಲಿ ಒಂದು ಬಂಡೆಯ ಮೇಲೆ ಕಾಲನ್ನು ಇಳಿಬಿಟ್ಟು ಕುಳಿತಿದ್ದಾನೆ. ಉಮೆ ತನ್ನಿಬ್ಬರು ಸಖಿಯರೊಂದಿಗೆ ಆತನನ್ನು ಪೂಜಿಸಲು ಪುಷ್ಪ-ಚಂದನದ ತಟ್ಟೆ ಹಿಡಿದು ಬಂದಿದ್ದಾಳೆ. ಶಿವನಲ್ಲಿ ಭಕ್ತಿ-ಭಾವದಿಂದ ನೆಟ್ಟ ದೃಷ್ಟಿ ಇಟ್ಟು ಅಚಲವಾಗಿ ನಿಂತಿದ್ದಾಳೆ. ಆಶ್ಚರ್ಯ! ಆತ ತನ್ನ ಚಿತ್ರದ ಶಿವನ ಭಂಗಿಯಂತೆಯೇ ಒಂದು ದಿನ ಧ್ಯಾನದಲ್ಲಿ ನಿಶ್ಚಲನಾಗಿ ಕುಳಿತಿದ್ದ, ಅವನ ಪ್ರಾಣಪಕ್ಷಿ ಮಾತ್ರ ಹಾರಿಹೋಗಿತ್ತು! ಆ ಚಿತ್ರ ಬಹುಕಾಲ ಕಾಳೀಕೃಷ್ಣನ ಮನೆಯಲ್ಲಿಯೇ ಇತ್ತು.

ದಿನೇ ದಿನೇ ತ್ರೈಲೋಕ್ಯನಾಥನ ವೈದ್ಯವೃತ್ತಿ ಯಶಸ್ಸು ಗಳಿಸಿದಂತೆಲ್ಲಾ ಅವನ ಆದಾಯವೂ ಹೆಚ್ಚತೊಡಗಿತು. ಅವನು ತನ್ನ ದುಡಿಮೆಯ ಹಣದಿಂದ ನಾರಿಕೇಲ್ ಡಂಗಾ (ಕಲ್ಕತ್ತಾದ ಒಂದು ಪ್ರದೇಶ)ದಲ್ಲಿ ಮನೆ ಮಾಡಿದ. ಬಾಲಕ ಕಾಳೀಕೃಷ್ಣ ಈಗ ಒಬ್ಬಂಟಿಯಲ್ಲ. ಅವನ ತಂಗಿ, ತಮ್ಮಂದಿರು ಒಬ್ಬೊಬ್ಬರಾಗಿ ಜನ್ಮ ತಳೆದು ಜಗತ್ತಿಗೆ ಬಂದಿದ್ದಾರೆ. ಹಿರಿಯಣ್ಣನೆಂಬ ಗೌರವದ ಸ್ಥಾನ ಈ ಬಾಲಕನ ಹೃದಯಕ್ಕೆ ಉಲ್ಲಾಸ ತರುತ್ತಿದೆ. ಅವರನ್ನು ನೋಡಿಕೊಳ್ಳುವುದು, ಅವರೊಂದಿಗೆ ಆಟ-ಪಾಠ, ಹಾಡು-ಕಥೆ ಇವುಗಳಲ್ಲಿ ಅವನ ದಿನಗಳು ಆನಂದದಿಂದ ಉರುಳುತ್ತಿವೆ.



ಹುಡುಗನಿಗೆ ವಿದ್ಯಾಭ್ಯಾಸದಲ್ಲಿ ಮನಸ್ಸು ಏಕಾಗ್ರವಾದರೂ, ಶಾಲೆ ಕೆಡುಕೆನಿಸದಿದ್ದರೂ, ಕಾಳೀಕೃಷ್ಣನು ಇತರ ಮಕ್ಕಳೊಡನೆ ಬೆರೆಯುತ್ತಿರಲಿಲ್ಲ; ಮಾಸ್ಟರ್‌ಗಳೊಂದಿಗೆ ಮಾತನಾಡಲೂ ಸಹ ಲಜ್ಜೆ ಅಡ್ಡ ಬರುತ್ತಿತ್ತು. ಹೀಗಾಗಿ ಶಾಲಾವೇಳೆಯನ್ನು ಹೇಗೋ ಮೌನವಾಗಿ ಕಳೆಯಬೇಕಿತ್ತು. ಒಳ್ಳೆಯ ಸ್ವಭಾವದವನೂ, ನಾಚಿಕೆ ಹಾಗೂ ಮೃದು ಸ್ವಭಾವದವನೂ ಆದ ಕಾಳೀಕೃಷ್ಣನ ಸ್ನೇಹವನ್ನು ಬಯಸಿ ಸಹಪಾಠಿಗಳು ಅವನ ಮೇಲೆ ಬಿದ್ದು ಬರುತ್ತಿದ್ದರು. ಪುಂಡರೂ ಸಹ ಇವನೊಂದಿಗೆ ಸೇರಬಯಸುತ್ತಿದ್ದರು; ಆದರೆ ಅವರೊಂದಿಗೆ ಇವನ ಸ್ನೇಹ ಬಲಿಯುತ್ತಿರಲಿಲ್ಲ. ಬಾಲಕ ಕಾಳೀಕೃಷ್ಣನ ಜಗತ್ತು ಶಾಲೆಯ ಗದ್ದಲದಿಂದ ದೂರ ಉಳಿಯುತ್ತು.

ಅವನ ಆ ಭಾವನಾಜಗತ್ತು ತನ್ನ ಮನೆಯ ಪರಿಸರದಲ್ಲಿ ನಿರಾತಂಕವಾಗಿ ಉಲ್ಲಾಸದಿಂದ ವಿಕಾಸಹೊಂದುತ್ತಿತ್ತು. ತಾಯಿಯೊಂದಿಗಿದ್ದು ಆಕೆಯ ಮನೆ ಕೆಲಸದಲ್ಲಿ ಸಹಾಯ ಮಾಡುವುದು, ಮನೆಯನ್ನು ಓರಣವಾಗಿಡುವುದು, ಅಂಗಡಿಯಿಂದ ಸಾಮಾನು ಖರೀದಿಸಿ ತರುವುದು, ಅಂಗಳದಲ್ಲಿ ಹೂತೋಟ ಮಾಡುವುದು ಇವೆಲ್ಲವೂ ಅವನ ಮನಸ್ಸಿಗೆ ಮುದ ನೀಡುತ್ತಿತ್ತು. ತಂದೆಯೂ ಸಹ ಅವನನ್ನು ನೆರೆಹೊರೆಯ ಹುಡುಗರೊಂದಿಗೆ ಬೆರೆಯಲು ಬಿಡುತ್ತಿರಲಿಲ್ಲ; ಕೇವಲ ತಮ್ಮ-ತಂಗಿಯರೇ ಈತನ ಸಂಗಾತಿಗಳು. ಹೊರಗಿನ ಆಟ-ಪಾಠಗಳು ಇಲ್ಲವೆಂದೇ ಹೇಳಬಹುದು. ಸೋದರಮಾವನ ಮನೆಗೆ ಹೋದಾಗ ಅಜ್ಜನ ದಿನಚರಿ ವಿಶೇಷವಾಗಿ ಈ ಬಾಲಕನ ಗಮನವನ್ನು ಸೆಳೆಯುತ್ತಿತ್ತು. ಆತನ ಸ್ವಾವಲಂಬನೆ, ಕಾರ್ಯತತ್ಪರತೆ ಮತ್ತು ನೇಮನಿಷ್ಠೆಗಳು ಈ ಮೊಮ್ಮಗನ ಶೀಲದಲ್ಲಿ ನಿಧಾನವಾಗಿ ಬೇರೂರತೊಡಗಿತು.

*(ಮುಂದುವರಿಯುವುದು)*